10.50 ಪಿ.ಎಂ.

ಇದರಲ್ಲ 1500 ಬಸ್ಸುಗಳಿಂದ ಬರುತ್ತಿರುವ ಸುಮಾರು 23 ಕೋಟಿ ರುಪಾಯಿ ಹಣ ಇದುವರೆಗೆ ಆಂಧ್ರಪ್ರದೇಶಕ್ಕೆ ಹೋಗಿದೆ ಎಂಬುದರ ಬಗ್ಗೆ ದಾಖಲಾತಿ ಸಿಕ್ಕಿದೆ. ಜೊತೆಗೆ ನಮ್ಮ ರಾಜ್ಯದಿಂದ ಒಂದು ವಾರಕ್ಕೆ ಒಂದು ಸೀಟಿಗೆ ನೂರು ರೂಪಾಯಿ ಹಾಕುತ್ತಿದ್ದಾರೆ. ಈ ಬಸ್ಸುಗಳವರು ಒಂದು ವಾರ ಓಡಿಸುತ್ತಾರೆ. ಎಲ್ಲೋ ಒಂದು ಕಡೆ ಸಿಕ್ಕಿಕೊಂಡಾಗ ಮಾತ್ರ ಆ ಒಂದು ವಾರದಲ್ಲಿ ಕೊಡಬೇಕಾದ ಹಣ 4800 ರೂಪಾಯಿಗಳನ್ನು ಅಲ್ಲಿ ಯಾರು ಹಿಡಿಯುತ್ತಾರೆ ಅವರಿಗೆ ಮಾತ್ರ ಕಟ್ಟುತ್ತಾರೆ. ಒಂದು ವಾರದಲ್ಲಿ ಬಸ್ಸನ್ನು ಹಿಡಿಯದ್ದಿದ್ದರೆ 4800 ರೂಪಾಯಿ ಯಾರು ಬಸ್ಸು ಓಡಿಸುತ್ತಿರುತ್ತಾರೆ ಅವರಿಗೆ ಉಳಿಯುತ್ತದೆ. ಇನ್ನೊಂದು ಇಂಟರೆಸ್ಟಿಂಗ್ ವಿಚಾರವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. 1500 ಜನರು ಯಾರು ಅಲ್ಲಿ ಪರ್ಮಿಟ್ ತೆಗೆದುಕೊಂಡಿದ್ದಾರೆ ಅವರು ಎಲ್ಲರೂ ಕೂಡ ಆಂಧ್ರಪ್ರದೇಶದ ಚಿತ್ತೂರು ಗ್ರಾಮದಲ್ಲಿ ವಾಸವಿದೇವೆಂದು ರೇಷನ್‌ಕಾರ್ಡಿನಲ್ಲಿ ಅವರ ಹೆಸರನ್ನು ಎಂಟ್ರಿ ಮಾಡಿಸಿ ಈ ರೇಷನ್‌ಕಾರ್ಡ್ ಆಧಾರದ ಮೇಲೆ ಅವರು ಇವತ್ತು ಪರ್ಮಿಟ್ ತೆಗೆದುಕೊಂಡಿಕೊಂಡಿದ್ದಾರೆ. ಆದರೆ ಅವರೆಲ್ಲರೂ ಕೂಡ ಕರ್ನಾಟಕದ ಮತದಾರರಾಗಿದ್ದಾರೆ. ಆ ಒಂದೇ ಕಾರಣಕ್ಕೆ ರೇಷನ್‌ಕಾರ್ಡಿನಲ್ಲಿ ಹೆಸರು ಎಂಟ್ರಿ ಆಗಿದೆ. ಜೊತೆಗೆ ಈ ಜಾಲದ ಬಗ್ಗೆ ಕರ್ನಾಟಕದಲ್ಲಿ ಈ ಹೋಟೆಲ್‌ನಲ್ಲಿ...

ಅಧ್ಯಕ್ಷರು : ತಾವು ಹೋಗಿ ಹೇಳಿಬಿಡಿ ಹೋಟೆಲಿಗೆ ಹೋಗಿ ರೈಡ್ ಮಾಡಿ ಹಿಡಿದುಕೊಂಡು ಬರುತ್ತಾರೆ. ನೀವು ಆಮೇಲೆ ಗುಟ್ಟಾಗಿ ಹೇಳಿ. ಈಗ ತಾವು ಉತ್ತರ ಕೊಡಿ. ಪತ್ರಿಕೆಯವರು ಇದನ್ನೇ ಅರ್ಧ ಪುಟ ಬರೆಯಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇವರು ಹೇಳುತ್ತಿರುತಕ್ಕ ಜಾಲ ಆ ಜಾಲದ ಹಿಂದೆ ಇರತಕ್ಕ ಉದ್ದೇಶ ಇದೆಲ್ಲ ಬಹಳ ಕಷ್ಟ ಅವರು ಹೇಳಿರತಕ್ಕ ವಿಚಾರ ಏನಿದೆ ಎಂದರೆ ಸರ್ಕಾರದ ಖಜಾನೆಗೆ ಹಣ ಕಡಿಮೆಯಾಗುತ್ತಿದೆ ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಬಸ್‌ಮಾಲೀಕರು ಮೊನ್ನೆ ಮುಷ್ಕರ ಮಾಡಿದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಹಣಕಾಸಿನ ಮಂತ್ರಿಗಳು, ಮಾನ್ಯ ಸಾರಿಗೆ ಮಂತ್ರಿಗಳು ನಾವೆಲ್ಲರೂ ಮತ್ತು ಹಲವಾರು ಶಾಸಕರು ಕುಳಿತು ಚರ್ಚೆ ಮಾಡಿದ್ದೇವೆ. ವಿಧಾನಸಭಾಧಿವೇಶನದ ನಂತರ ಹಣಕಾಸಿನ ಮಂತ್ರಿಗಳು, ಸಾರಿಗೆ ಮಂತ್ರಿಗಳು, ಗೃಹ ಮಂತ್ರಿಗಳು ನಾವೆಲ್ಲರೂ ಮತ್ತು ಹಲವಾರು ಶಾಸಕರು ಕುಳಿತು ಚರ್ಚೆ ಮಾಡಿದ್ದೇವೆ. ವಿಧಾನಸಭಾಧೀವೇಶನದ ನಂತರ ಹಣಕಾಸಿನ ಮಂತ್ರಿಗಳು, ಸಾರಿಗೆ ಮಂತ್ರಿಗಳು, ಗೃಹ ಮಂತ್ರಿಗಳು ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಕರೆಯಿಸಿ ಇದರ ಬಗ್ಗೆ ನಾವು ಸವಿಸ್ತಾರವಾಗಿ ವಿಚಾರ ಮಾಡಿ ಸರ್ಕಾರದ ಖಜಾನೆಗೆ ಆ ರೀತಿ ಏನಾದರೂ ಹಣ ಬರುವುದು ಕಡಿಮೆಯಾಗಿದ್ದರೆ ಅದನ್ನು ಖಂಡಿತವಾಗಿ ಸರಿ ಮಾಡುತ್ತೇವೆ. ಅದು ಸೋರಿಹೋಗದಂತೆ ತಡೆಗಟ್ಟುತ್ತೇವೆ. ಅವರು ಹೇಳಿರತಕ್ಕ ಜಾಲದ ಬಗ್ಗೆ ಮಾಹಿತಿ ಏನಿದೆ ಅದರ ಸ್ವಲ್ಪ ಭಾಗವನ್ನು ಅವರು ಕಳುಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿ ಮಾನ್ಯ ಸದಸ್ಯರು ಆ ರೀತಿ ಹೆಚ್ಚಿನ ಮಾಹಿತಿಯನ್ನು ನನಗೆ ಗೌಪ್ಯವಾಗಿ ಹೇಳುವುದಾದರೂ ಸರಿ, ಅದರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಸತ್ಯಾಗ್ರಹ ಪ್ರಾರಂಭಿಸಿದ ವೈ.ಕೆ. ರಾಮಯ್ಯನವರ ಬಂಧನ

ಶ್ರೀ ವಾಟಾಳ್ ನಾಗರಾಜ್:ಮಾನ್ಯ ಅಧ್ಯಕ್ಷರೆ, ಎರಡು ವಿಚಾರಗಳನ್ನು ನಾನು ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ತಮ್ಮ ಹತ್ತಿರ ಮಾತನಾಡಿದ್ದೇನೆ. ಒಂದು ಈ ಸದನದ ಸದಸ್ಯರಾಗಿದ್ದ ಶ್ರೀ ವೈ. ಕೆ. ರಾಮಯ್ಯನವರು ಹೇಮಾವತಿ ಕಾಮಗಾರಿ

ವಿಳಂಬವಾಗಿದೆ ಬಹಳ ದಿನಗಳಿಂದ ತೊಂದರೆಯಾಗಿದೆ, ಇದನ್ನು 25ರೊಳಗೆ ಆರಂಭಿಸದಿದ್ದರೆ 26ರಂದು ಸತ್ಯಾಗ್ರಹ ಮಾಡುತ್ತೇನೆಂದು ಅವರು ಮೊದಲೇ ಸರ್ಕಾರಕ್ಕೆ ಹೇಳಿಕೆ ಕೊಟ್ಟು, ಕೊಡಲಿಲ್ಲ. 26ರಂದು ಅವರು ಸತ್ಯಾಗ್ರಹ ಮಾಡಿದರು. ಸತ್ಯಾಗ್ರಹ ಪ್ರಾರಂಭವಾದುದು ಮಹಾತ್ಮ ಗಾಂಧೀಜಿಯವರ ಪ್ರತಿಮೆ ಮುಂದೆ. ಸತ್ಯಾಗ್ರಹದಲ್ಲಿದ್ದ ಜನರು ಸಾವಿರಾರು ಜನರೇನಲ್ಲ; 50 ಜನರು ಮಾತ್ರ ಶಾಂತಿಯುತವಾಗಿ ಸತ್ಯಾಗ್ರಹ ಪ್ರಾರಂಭಮಾಡಿ ಅವರು ಕುಮಾರಕೃಪ ಹತ್ತಿರ ಧರಣಿ ಮಾಡುತ್ತೇವೆಂದು ಬಂದರು. ಕುಮಾರ ಕೃಪ ಹತ್ತಿರ ಧರಣಿ ಮಾಡುತ್ತೇವೆಂದು ಬಂದಾಗ ಯಾವುದೇ ಗಲಾಟೆಯಾಗಲಿ, ಗದ್ದಲವಾಗಲಿ ಜನಗಳಿಗೆ ತೊಂದರೆಯಾಗಲಿ ಅಥವಾ ಅಲ್ಲಿ ಹೋಗತಕ್ಕೆ ವಾಹನಗಳಿಗೆ ತೊಂದರೆಯಾಗಲಿ ಇಲ್ಲ ಯಾವುದೇ ಅಡೆತಡೆ ಇಲ್ಲ. ವಿನಾಕಾರಣ ಅವರನ್ನು ಹಿಡಿದು ಬಂಧಿಸಿ ಅವರ ಮೇಲೆ ಸುಮಾರು ಕೇಸುಗಳನ್ನು ಹಾಕಿದ್ದಾರೆ. ನನ್ನನ್ನು ಸಾವಿರಾರು ಬಾರಿ ಬಂಧಿಸಿದ್ದಾರೆ; ನನ್ನ ಅನುಭವ ಹೇಳುತ್ತೇನೆ. ಬಂಧನದಲ್ಲಿ 3-4 ರೀತಿ ಇರುತ್ತದೆ. ತೀರಾ ಕೋಪ ಇದ್ದರೆ ನೇರವಾಗಿ ಜೈಲಿಗೆ ಕಳುಹಿಸುತ್ತಾರೆ.ಕೋಪ ಇಲ್ಲ ಅಂದರೆ ಬಂಧನ ಮತ್ತು ಬಿಡುಗಡೆ. ಸರ್ಕಾರದಲ್ಲಿ ಈ ಬಂಧನ 3-4 ತರಹ ಇರುತ್ತದೆ. ತೀರಾ ತೊಂದರೆ ಕೊಡಬೇಕು ಎಂದರೆ ಪೊಲೀಸ್ ಕಾಯಿದೆಯಲ್ಲಿರತಕ್ಕ ಎಲ್ಲಾ ಕಲಂಗಳನ್ನು 1-2-3-4 ಎಂದು ಹಾಕುತ್ತಾರೆ. ಇಲ್ಲದಿದ್ದರೆ ಸಾಮಾನ್ಯವಾಗಿ ಬಿಡೋಣವೆಂದರೆ, ಮುನ್ನೆಚ್ಚರಿಕೆಯಿಂದ ಬಂದಿಸಿ ಬಿಡುಗಡೆ ಮಾಡತಕ್ಕದ್ದು. ಹೀಗೆ ಅನೇಕ ವಿಧಿವಿಧಾನಗಳನ್ನು ಸೂತ್ರವನ್ನು ಸರ್ಕಾರ ತನ್ನ ಕೈಯಲ್ಲಿ ಇಟ್ಟುಕೊಂಡಿದೆ. ನಾನು ನೇರವಾಗಿ ಇದರ ಬಗ್ಗೆ ಗೃಹ ಸಚಿವರ ಮೇಲೆ ಆರೋಪಣೆ ಮಾಡುತ್ತೇನೆ. ಅವರು ಅರೆಸ್ಟ್ ಮಾಡಿ ಒಳಗೆ ಇಟ್ಟರು ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಅವರು ಹೇಳಿದ್ದಾರೆ ಇಕ್ಕಟ್ಟಿಗೆ ಸಿಕ್ಕುತ್ತಾರೆ. ನಾನು ಅದನ್ನು ತಂದಿಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ನೇರವಾಗಿ ಇದು ಮಾನ್ಯ ಮುಖ್ಯಿ ಮಂತ್ರಿಗಳಿಗೆ ಸಂಬಂಧಪಟ್ಟದ್ದುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರಿಗೆ ಅರೆಸ್ಟ್ ಮಾಡುವ ಪ್ರಶ್ನೆ ಬರುವುದಿಲ್ಲ. ಅವರು ತಾನಾಗಿಯೇ ತಾನು ಜೈಲಿಗೆ ಹೋಗುತ್ತೇನೆಂದು ಹೇಳಿದರು. ಶ್ರೀ ಹೆಚ್.ಎನ್. ನಂಜೇಗೌಡ : ಒಂದು ಲಕ್ಷ ಜನರು ಜೈಲಿಗೆ ಹೋಗುತ್ತೇವೆಂದರೆ ನೀವು ಊಟ ಹಾಕಿಕೊಂಡು ಹೋಗುತ್ತೀರಾ? ತಾನಾಗಿಯೇ ಜೈಲಿಗೆ ಹೋಗುತ್ತೇನೆಂದರೆ ಅದು ಅಷ್ಟು ಸುಲಭವಾಗುವುದಿಲ್ಲ. ಹೋಗುವವರನ್ನೆಲ್ಲ ಜೈಲಿಗೆ ಕರೆದುಕೊಂಡು ಹೋಗುತ್ತೇವೆಂದರೆ ಏನಲ್ಲ ಜನ...

ಶ್ರೀ ಪಿ.ಜಿ.ಆರ್. ಸಿಂಧ್ಯ : ಜೈಲಿಗೆ ಹೋಗುತ್ತೇವೆಂದರೆ ಕಳುಹಿಸುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಗೃಹ ಸಚಿವರ ಬಗ್ಗೆ ನನಗೆ ಅಪಾರವಾದ ವಿಶ್ವಾಸ ಇದೆ. ಜೈಲಿನ ಬಾಗಿಲನ್ನು ತೆರೆದಿರುತ್ತಾರೆಯೇ? ನನಗೆ ಗೊತ್ತಿದೆ, ನಾವು ನೀವು ಹೋಗೋಣ ಜೈಲಿಗೆ ನಿಮ್ಮನ್ನು ಬಿಡಬಹುದು, ಆದರೆ ನನ್ನನ್ನು ಬಿಡುವುದಿಲ್ಲ. ನಾನಾಗಿಯೇ ಜೈಲಿಗೆ ಹೋಗುತ್ತೇನೆಂದರೆ ಯಾರನ್ನೂ ಅಲ್ಲ ಬಿಡುವುದಿಲ್ಲ. ಅದು ಸಾಧ್ಯವೂ ಇಲ್ಲ. ಹೊಸದಾಗಿ ಕಾಯಿದೆ ಮಾಡಿದ್ದರೆ ಅದು ನನಗೆ ಗೊತ್ತಿಲ್ಲ. ಅವರು ವಿಚಾರ ತಿಳಿದುಕೊಂಡಿದ್ದೇನೆ, ಜನರಿಗೆ ಆಗಲ, ರಸ್ತೆಗೆ ಆಗಲಿ, ಸರ್ಕಾರಕ್ಕೆ ಆಗಲಿ ಯಾವುದೇ ವಿಧವಾದ ತೊಂದರೆ ಇಲ್ಲದೆ ಶಾಂತಿಯುತವಾದ ಚಳುವಳಿಯನ್ನು ನಡೆಸುವುದಕ್ಕೆ ಹೋದ ಶ್ರೀ ವೈ.ಕೆ. ರಾಮಯ್ಯನವರ ಮೇಲೆ ಈ ರೀತಿ 3-4 ಕಲಂಗಳನ್ನು ಹಾಕಿ ಮೊಕದ್ದಮೆ ದಾಖಲು ಮಾಡಿದ್ದಾರೆ. ಮಾನ್ಯ ಗೃಹ ಸಚಿವರು ಹೇಳುತ್ತಾರೆ, ಅವರಾಗಿ ಅವರೇ ಜೈಲಿಗೆ ಹೋದರು ಎಂದು. ಇದನ್ನು ನಾನು ಒಪ್ಪುವುದಿಲ್ಲ. ಅವರು ಇವತ್ತು ಜೈಲಿನಲ್ಲಿದ್ದಾರೆ, ಇದು ಸ್ಪಷ್ಟ. ಪೂರ್ವಾಗ್ರಹ

ಪೀಡಿತರಾಗದೆ, ವ್ಯಕ್ತಿ ದ್ವೇಷ ಸಾಧಿಸಿದೆ ಇರತಕ್ಕ ಅವರು ರಾಜ್ಯದಲ್ಲಿ ಒಬ್ಬರು ಒಳ್ಳೆಯ ಗಣ್ಯ ವ್ಯಕ್ತಿ, ಒಂದು ಪಕ್ಷದ ಮುಖಂಡರಾಗಿದ್ದಾರೆ. ಇದರಲ್ಲಿ ಪ್ರಾಮಾಣಿಕವಾದ ವಿಚಾರ ಇದ್ದರೆ ಮಾನ್ಯ ಮುಖ್ಯಿ ಮಂತ್ರಿಗಳು ಮಧ್ಯೆ ಪ್ರವೇಶ ಮಾಡಿ ಹಾಕಿರತಕ್ಕ ಕೇಸುಗಳು ಏನಿವೆ ಆ ಸುಳ್ಳು ಕೇಸುಗಳು, ಆ ಸುಳ್ಳು ಕೇಸುಗಳನ್ನು ಹಿಂತೆಗೆದುಕೊಂಡು ಅವರನ್ನು ಕೂಡಲೇ ಬಿಡುಗಡೆ ಮಾಡಿ ಇವತ್ತು ಅವರ ಬೇಡಿಕೆ ಏನಿದೆ ಅದನ್ನು ಕೇಳತಕ್ಕ ವ್ಯವಸ್ಥೆಯನ್ನು ಮಾಡದಿದ್ದರೆ ನಾವು ಅವರನ್ನು ನೋಡುವುದಕ್ಕೆ ಜೈಲಿಗೆ ಹೋಗಬೇಕಾಗುತ್ತದೆ. ನೀವು ಬಿಡುತ್ತೀರೋ ಇಲ್ಲವೋ ಆ ಪ್ರಶ್ನೆ ಬೇಡ. ಉದ್ದೇಶ ಬೇರೆ ಬೇರೆ ದಾರಿಗೆ ಹೋಗುತ್ತದೆ; ಮತ್ತು ಜನರಿಗೆ ಏನಾಗುತ್ತದೆ ಎಂದರೆ ದೇವೇಗೌಡರ ಸರ್ಕಾರದವರು ಶ್ರೀ ವೈ.ಕೆ. ರಾಮಯ್ಯನವರನ್ನು ಒಳಗಡೆ ಇಟ್ಟಿದ್ದಾರೆಂಬ ಕೆಟ್ಟ ಹೆಸರು ನಿಮಗೆ ಏತಕ್ಕೆ ಬರಬೇಕು, ಆದ್ದರಿಂದ ನಾನು ಪ್ರಾಮಾಣಿಕವಾಗಿ ಪ್ರಾರ್ಥಿಸುತ್ತಿದ್ದೇನೆ, ಈಗ ಅದರ ಬಗ್ಗೆ ಸರ್ಕಾರ ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ಉತ್ತರ ಕೊಟ್ಟರೆ ಸಂತೋಷವಾಗುತ್ತದೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಶ್ರೀ ವೈ.ಕೆ. ರಾಮಯ್ಯನವರು ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ನಾನು ಆ ಬೇಡಿಕೆಗಳನ್ನು ನೋಡಿಲ್ಲ. ಆದರೆ ಅವರು ಇಟ್ಟಿರತಕ್ಕ ಎಲ್ಲಾ ಬೇಡಿಕೆಗಳು ಸರಿ ಇರುತ್ತವೆಂದು ನಾನು ಹೇಳುವುದಿಲ್ಲ. ಅಥವಾ ಎಲ್ಲಾ ಬೇಡಿಕೆಗಳು ಸರಿ ಇಲ್ಲವೆಂದು ಹೇಳುವುದಿಲ್ಲ. ಸರಿ ಇರತಕ್ಕ ಬೇಡಿಕೆಗಳು ಇರುತ್ತವೆ. ಅಷ್ಟು ಮಾತ್ರ ನನಗೆ ಗೊತ್ತು. ಕೆಲಸ ಪ್ರಾರಂಭ ಮಾಡಬೇಕು ಎನ್ನುತ್ತಾರೆ. ತುಮಕೂರು ಜಿಲ್ಲೆಯ ಬಗ್ಗೆ, ಅಲ್ಲಿನ ಜನರ ಬಗ್ಗೆ, ನೀರಿನ ಬಗ್ಗೆ ಅನುಕಂಪ ಇದೆ. ಆದುದರಿಂದ ಇದು ಬಗೆಹರಿಸಲಾರದ ಸಮಸ್ಯೆ ಏನೂ ಅಲ್ಲ. ದಯವಿಟ್ಟು ಸರ್ಕಾರ ಯಾವಾಗ ಕೆಲಸ ಮಾಡುತ್ತದೆ, ಏನು ಮಾಡುತ್ತದೆ. ಏನಾದರೂ ಒಂದು ಬೇಕಲ್ಲ. ಅದಕ್ಕೆ ಒಂದು ಭರವಸೆ ಕೊಟ್ಟು ಅದನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು, ಇತಿಶ್ರೀ ಹಾಡಬೇಕು ಎಂಬುದು ಅವರ ಉದ್ದೇಶ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಶ್ರೀ ವೈ.ಕೆ. ರಾಮಯ್ಯನವರಿಗೆ ಈ ಸರ್ಕಾರದಲ್ಲಿರತಕ್ಕ ನಮಗಾಗಲಿ ಅಥವಾ ನಮ್ಮ ನಾಯಕರು ಮತ್ತು ಮುಖ್ಯಿಮಂತ್ರಿಗಳಿಗಾಗಲಿ ವೈಯಕ್ತಿಕವಾದ ಯಾವುದೇ ದ್ವೇಷ ಮತ್ತೊಂದು ಇಲ್ಲ. ಈ ಸ್ಥಾನದಲ್ಲಿ ನಾವು ಕುಳಿತುಕೊಂಡು ನಮ್ಮ ವೈಯಕ್ತಿಕ ರಾಗದ್ವೇಷಗಳನ್ನು ತೀಟೆಗಳನ್ನು ತೀರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದು ಮಾಡಬಾರದು, ಮಾಡಿದರೆ ಅದು ತಪ್ಪಾಗುತ್ತದೆ ಅವರು ಯಾವ ವಿಚಾರಕ್ಕೋಸ್ಕರ ಹೋರಾಟ ಮಾಡಬೇಕೆಂದು ಮುಂದೆ ಹೊರಟಿದ್ದಾರೆ ಅದನ್ನು ತಪ್ಪು ಎಂದು ಸರ್ಕಾರ ಹೇಳಿಲ್ಲ. ಹೇಮಾವತಿ ನೀರಿನ ಅಥವಾ ಕುಡಿಯುವ ನೀರಿನ ಅಥವಾ ಹೇಮಾವತಿ ನೀರನ್ನು ತುಮಕೂರಿನ ರೈತರಿಗೆ ಕೊಡತಕ್ಕ ವಿಚಾರದಲ್ಲಿ ನಾವುಹೋರಾಟ ಮಾಡುತ್ತೇವೆಂಬ ದೃಷ್ಟಿಯಿಂದ ಹೊರಟಿದ್ದಾರೆ. ಅದರ ಬಗ್ಗೆ ನಮ್ಮ ಸರ್ಕಾರ್ ಖಂಡಿತವಾಗಿ ರೈತರ ವಿಚಾರದಲ್ಲಿ, ಸಾಮಾನ್ಯವಾದ ಜನರಿಗೆ ಕುಡಿಯುವ ನೀರು ಕೊಡತಕ್ಕ ಆದ್ಯತೆ ಕೊಟ್ಟು ಕೆಲಸ ಮಾಡುತ್ತದೆಂಬುದು ತಮಗೆಲ್ಲ ತಿಳಿದಿರತಕ್ಕ ವಿಚಾರ.

ಅದಕ್ಕೆ ಬೇಕಾಗಿರತಕ್ಕ ಎಲ್ಲಾ ಹಣವನ್ನು ಶಕ್ತಿಮೀರಿ ನಾವು ಕೊಡುವುದಕ್ಕೆ ನಮ್ಮ ಸರ್ಕಾರ ನಮ್ಮ ಮುಖ್ಯಿಮಂತ್ರಿಗಳು ಪ್ರಯತ್ನವನ್ನು ಮಾಡುತ್ತಿದ್ದೇವೆ. ಯಾವರೀತಿ ಅವರು ಜೈಲಿನಿಂದ ನನಗೆ ಎರಡು ಪತ್ರಗಳನ್ನು ಬರೆದಿದ್ದಾರೆ. ಅದರ ವಿವರಣೆಗಳನ್ನು ಸಸ ಈ ಸಂದರ್ಭದಲ್ಲಿ ನಾನು ಕೊಡುವುದಕ್ಕೆ ಹೋಗುವುದಿಲ್ಲ. ಇಷ್ಟೇ ಹೇಳುತ್ತೇನೆ, ನಮ್ಮ ಸರ್ಕಾರ ಆದ್ಯತೆ ಆಧಾರದ ಮೇಲೆ ಹೆಚ್ಚಿನ ಹಣವನ್ನು ಇಲ್ಲಿಗೆ ಕೊಟ್ಟು ನಾವು ಆದಷ್ಟು ಬೇಗ ನೀರನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ನಾನು ಅದರ

ಬಗ್ಗೆ ದೀರ್ಘವಾದ ಸ್ಟೇಟ್‌ಮೆಂಟನ್ನು ಬೇಕಾದರೆ ಹೇಳುತ್ತೇನೆ ವೈ. ಕೆ. ರಾಮಯ್ಯನವರ ಮೇಲೆ ಯಾವ ಯಾವ ಸೆಕ್ಷನ್ಸ್ ಹಾಕಿದ್ದಾರೆ ಅದನ್ನೆಲ್ಲಾ ಹೇಳುತ್ತೇನೆ ನಾನು ಆ ದಿವಸ ಸೇಲಂಗೆ ಹೊರಟಿದ್ದೆ. ಆಗ ಪೋಲೀಸ್ ಕಮಿಷನರ್ ಅವರು ಬಂದು ವೈ. ಕೆ. ರಾಮಯ್ಯನವರು ಮಹಾತ್ಮ ಗಾಂಧಿ ಪ್ರತಿಮೆ ಹತ್ತಿರ ಧರಣ ಮಾಡಿದರು ಅವರನ್ನು ಅರೆಸ್ಟ್‌ಮಾಡಿಕೊಂಡು ನಾವು ಬಿಟ್ಟೆವು. ಅದಾದನಂತರ ಅವರು 'ಕೃಷ್ಣಾ' ಹತ್ತಿರ ಹೋಗಿ ಅಲ್ಲಿ ಧರಣ ಮಾಡಿದರು. ಅಲ್ಲೂ ಸಹಿತ ನಾವು ಬಿಟ್ಟೆವು. ಅದಾದನಂತರ ಅವರು ಕುಮಾರಕೃಪ ಗೆಸ್ಟ್‌ಹೌಸ್‌ನಲ್ಲಿ ಮುಖ್ಯಮಂತ್ರಿಗಳ ರೂಮಿಗೆ ಹೋದರು. ಆ ಸಂದರ್ಭದಲ್ಲಿ ನಾವು ಅವರನ್ನು ಕರೆದುಕೊಂಡುಹೋಗಿ ಅರೆಸ್ಟ್ ಮಾಡಬೇಕಾಗಿ ಬಂತು. ಮ್ಯಾಜಿಸ್ಟ್ರೇಟ್ ಮುಂದೆ ನಾವು ಪ್ರೊಡ್ಯೂಸ್‌ಮಾಡಿದೆವು. ಆಗ ಇಲ್ಲ, ನಾನು ಬೇಲ್ ಕೊಡುವುದಿಲ್ಲ ಎಂದು ಹೇಳಿದರು. ಜೈಲಿಗೇ ಹೋಗುತ್ತೇನೆಂದು ಹೇಳಿ ಪ್ರಿಫರ್ ಮಾಡಿದರು. ಬೇಲ್ ಕೊಡದೇ ಇದ್ದ ಕಾರಣದಿಂದಾಗಿ ಅವರು ಜೈಲಿಗೆ ಹೋಗಬೇಕಾದಂಥ ಪರಿಸ್ಥಿತಿ ಬಂತು. ಒಬ್ಬರು ಮ್ಯಾಜಿ ಸ್ಟ್ರೇಟರು ರಜಾದ ಮೇಲೆ ಇದ್ದುದರಿಂದ ಮತ್ತೊಬ್ಬ ಮ್ಯಾಜಿಸ್ಟ್ರೇಟ್ ಹತ್ತಿರ ನಾವು ಏನೋ ಸಾಧನೆ ಮಾಡುತ್ತೇವೆ ಎನ್ನತಕ್ಕಂಥದ್ದು ಈ ಸರ್ಕಾರದ ಮುಂದೆ ಖಂಡಿತವಾಗಿ ಇಲ್ಲ ಎನ್ನುವುದನ್ನು ನಾನು ಸ್ಪಷ್ಟವಾದ ಶಬ್ದಗಳಲ್ಲಿ ಹೇಳಿ ಅವರ ಮೇಲೆ ಯಾವುದೇ ರೀತಿಯ ದ್ವೇಷ ಮತ್ತೊಂದಿಲ್ಲ ಅವರು ವಾಪಸು ಬರಬೇಕು. ಅವರು ಏನು ಹಠ ಹಿಡಿದುಕೊಂಡು ಕುಳಿತುಕೊಂಡಿದ್ದಾರೆ ಅದನ್ನು ಹಾಕುವ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ, ಅವರಾಗಿಯೇ ಹಾಕಿಸಿಕೊಂಡಿರುವುದು.

ಶ್ರೀ ವಾಟಾಳ್‌ನಾಗರಾಜ್: ಸ್ವಾಮಿ ನಾನು ಹೇಳುವುದು , ಯಾವುದೇ ಗಲಾಟೆ ಇಲ್ಲದೆ ಶಾಂತಿಗೆ ಭಂಗವಾಗದೇ ಇರತಕ್ಕ ಪರಿಸ್ಥಿತಿಯಲ್ಲಿ ಅವರ ಮೇಲೆ ನೀವು ಕೇಸ್‌ಗಳನ್ನು ಉದ್ದೇಶಪೂರ್ವಕವಾಗಿ ಹಾಕಿದಾಗ ಬೇಲ್‌ಯಾರು ಕೊಡುತ್ತಾರೆ? ಇದು ಪ್ರಶ್ನೆ. ನ್ಯಾಯಾಲಯದ ಬಗ್ಗೆ ನಾವೇನೂ ಮಾತನಾಡುವ ಪ್ರಶ್ನೆ ಇಲ್ಲವೇ ಇಲ್ಲ. ಅವರು ಪ್ರಾಮಾಣಿಕವಾಗಿ ಜಾಮೀನು ಕೊಟ್ಟರೆ ಬಿಡುಗಡೆ ಮಾಡುತ್ತಾರೆ. ಜಾಮೀನು ಕೊಡತಕ್ಕ ಪ್ರಶ್ನೆ ಯಾವಾಗ ಬರುತ್ತದೆ? ನೀವು ಸೆಕ್ಷನ್‌ನಲ್ಲಿ ಕೇಸ್ ಹಾಕಿರುವುದರಿಂದ ನೀವು ಉದ್ದೇಶ ಪೂರ್ವಕವಾಗಿ ಕೇಸ್‌ಗಳನ್ನು ಹಾರಿದ್ದೀರಿ ಎನ್ನುವುದು ನಮ್ಮ ಆದ್ದರಿಂದ ತಾವು ದಯಮಾಡಿ ಆ ಕೇಸ್‌ಗಳನ್ನು ಹಿಂತೆಗೆದುಕೊಂಡು ಇವತ್ತೇ ಆ 'ಬಿ' ರಿಪೋರ್ಟ್ ಏನು ಹಾಕಬೇಕೋ ಅದನ್ನು ಮಾಡಿ ತಕ್ಷಣ ಸಾಯಂಕಾಲದೊ ಬಿಡುಗಡೆ ಮಾಡತಕ್ಕ ಒಂದು ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡುತ್ತೀರಾ ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸ್ವಾಮೀ, ಅದಷ್ಟೇ ಅಲ್ಲ. ನಿಮಗೆ ಹೇಳಬೇಕು ಎಂದರೆ ನೀವು ಊಟ ಮಾಡಿ ಅಂದರೆ ಊಟವನ್ನೂ ಮಾಡುವುದಿಲ್ಲ, ಆಸ್ಪತ್ರೆಗೆ ಕರೆದುಕೊಂಡು ಹೋದರೆ ಡಾಕ್ಟರ್ ಹತ್ತಿರ ಔಷಧಿ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಹೀಗೆಲ್ಲಾ ಇದೆ. ತಮಗೆ ಗೊತ್ತಿದೆ. ವೈ.ಕೆ. ರಾಮಯ್ಯನವರು ನಮ್ಮ ಜೊತೆಯಲ್ಲೇ ಇದ್ದವರು. ಅವರ ಬಗ್ಗೆ ಎಲ್ಲರಿಗೂ ಬಹಳ ಪ್ರೀತಿ ವಿಶ್ವಾಸ ಎಲ್ಲಾ ಸಹ ಇದೆ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಗೆ ಹೋಗೋಣ. ಚರ್ಚೆ ಬೇಡ.

ಶ್ರೀ ಎಚ್.ಎನ್. ನಂಜೇಗೌಡ : ಕೇಸ್ ವಾಪಸ್ ತೆಗೆದುಕೊಂಡರೆ ಮುಗಿಯಿತು.

ಶ್ರೀ ವಾಟಾಳ್ ನಾಗರಾಜ್ : ಅವರನ್ನು ಬಿಡುಗಡೆ ಮಾಡಿ ಸ್ವಾಮಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ಯಾರು ಸ್ವಾಮಿ ಬಿಡುಗಡೆ ಮಾಡುವುದಕ್ಕೆ?

ಶ್ರೀ ವಾಟಾಳ್ ನಾಗರಾಜ್: ಒಳಗಡೆ ಕಳುಹಿಸಿಬಿಟ್ಟು ನಾವು ಯಾರು ಅಂದರೆ?

ಶ್ರೀ ಕಾಗೋಡು ತಿಮ್ಮಪ್ಪ : ಅವರೇನು ಈಗ ಕ್ರಿಮಿನಲ್ ಅಫೆನ್ಸ್ ಮಾಡಿಲ್ಲ. ರಾಜಕೀಯವಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಒತ್ತಾಯ ಮಾಡಿದ್ದಾರೆ. ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಂಡರೆ ಮುಕ್ತಾಯವಾಯಿತು, ಅದರಲ್ಲೇನು?

ಅಧ್ಯಕ್ಷರು : ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಅದಕ್ಕೆ ಎನ್.ಸಿ.ಆರ್. ಇಷ್ಯೂ ಮಾಡಿದರೆ ಆಯಿತು.

ಶ್ರೀ ವಾಟಾಳ್ ನಾಗರಾಜ್ : ಇದು ಕೃಪೆ ಏನಲ್ಲ, ವೈ.ಕೆ. ರಾಮಯ್ಯನವರು ಇಂಥ ಕೃಪೆಗಳಿಗೆ ಒಳಗಾಗುವ ಮನುಷ್ಯರಲ್ಲ. ಅವರದೇ ಆದಂಥ ದೃಷ್ಟಿಕೋನ ಇದೆ. ತಮಗೆ ಹೇಳತಕ್ಕಂಥದ್ದು ತಾವು ಪ್ರಾಮಾಣಿಕವಾಗಿ ಪರಿಶೀಲನೆ ಮಾಡಿ ಸಾಯಂಕಾಲದೊಳಗೆ ಅವರನ್ನು....

ಅಧ್ಯಕ್ಷರು : ಒಪ್ಪಿಕೊಂಡಿದ್ದಾರಲ್ಲಾ ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಶಿವಣ್ಣ : ಅಧ್ಯಕ್ಷರೆ, ರಾಮಯ್ಯನವರು ನಮ್ಮ ಕ್ಷೇತ್ರದವರು, ನಮ್ಮ ಜಿಲ್ಲೆಯವರು. ಇದು ಸ್ವಪ್ರತಿಷ್ಠೆಯಿಂದ ಇಬ್ಬರು ಚಿಂತನೆ ಮಾಡುತ್ತಾರೆ, ಸರ್ಕಾರ ಮತ್ತು ರಾಮಯ್ಯನವರು. ಆ ದೃಷ್ಟಿಯಿಂದ ಕೇಸ್ ಏನೂ ಹಾಕಬೇಕಾದ್ದು ಅಥವಾ ಹಾಕದೇ ಇರತಕ್ಕಂಥದ್ದು ಏನಿಲ್ಲ, ಮಂತ್ರಿಗಳು ವಾಪಸ್ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಏನು ತೆಗೆದುಕೊಳ್ಳಬಹುದು?

ಶ್ರೀ ಎಸ್. ಶಿವಣ್ಣ : ಕೇಸ್ ವಾಪಸ್ ತೆಗೆದುಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್ : ಪ್ರಾಮಾಣಿಕವಾಗಿ ವೈ.ಕೆ. ರಾಮಯ್ಯನವರು ಒಬ್ಬ ಹೋರಾಟಗಾರರು. ಅದನ್ನು ನಾವು ನಿಸ್ಸಂದೇಹವಾಗಿ ಹೇಳಬೇಕು. ನಾನು ಅವರ ಬಗ್ಗೆ ಗೌರವ ಇಟ್ಟುಕೊಂಡೇ ಹೇಳುತ್ತೇನೆ. ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಪ್ರತಿಷ್ಠೆ ಇಲ್ಲದೇ ಯಾರೂ ಇಲ್ಲ. ನಾವೆಲ್ಲಾ ಪ್ರತಿಷ್ಠೆ ಇಟ್ಟುಕೊಂಡೇ ಬಂದಿರುವುದು. ನಾವೆಲ್ಲಾ ಸದನಕ್ಕೆ ಬರಬೇಕಾದರೆ ಹಿಂದೆ ಮುಂದೆ ಸ್ವಲ್ಪ ಪ್ರತಿಷ್ಠೆ ಇರುತ್ತದೆ. ಇಲ್ಲಿ ಪ್ರತಿಷ್ಠೆ ಗಿತಿಷ್ಠೆ ಮಾತನಾಡುವುದು ಬೇಡಿ ಸ್ವಾಮಿ. ಅಧ್ಯಕ್ಷರ ಮುಖಾಂತರ ತಮಗೆ ನಾನು ಹೇಳತಕ್ಕದ್ದು ಇಷ್ಟನ್ನು ದೊಡ್ಡದು ಮಾಡಬೇಡಿ,ಅವರನ್ನು ಇವತ್ತು ಬಿಡುಗಡೆ ಮಾಡಬೇಕು. ಎಷ್ಟೋ ಜನದ್ದು ಕೇಸ್‌ಗಳು ಇರುತ್ತವೆ. ನಾನು ಬೇರೆ ಸಂದರ್ಭದಲ್ಲಿ ಅದನ್ನು ಹೇಳುತ್ತೇನೆ. ಮೊನ್ನೆ ಸಂಸದೀಯ ಸಚಿವರು ಒಂದು ಲಕ್ಷ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಒಂದು ಲಕ್ಷ. ಒಂದಲ್ಲ, ಎರಡಲ್ಲ. ಹೇಳುತ್ತೇನೆ ಕೇಳಿ ಬೈರೇಗೌಡರೆ, ನೀವು ನನ್ನನ್ನು ಕರೆದುಕೊಂಡುಹೋಗಿದ್ದಿರಿ ನಿಮ್ಮೂರಿಗೆ ಯಾರದೋ ಹೊಡೆದಾಟ ಗಲಾಟೆ ಆದಾಗ. ನನ್ನನ್ನು ಕರೆದುಕೊಂಡು ಹೋಗಿದ್ದರು ನೋಡಿ ಬನ್ನಿ ಏನೋ ನಡೆದುಹೋಗಿದೆ ಎಂದು. ಅದನ್ನು ತೋರಿಸಿದಂಥ ಬೈರೇಗೌಡರು ಈಗ ಬದಲಾವಣೆಯಾಗಿದ್ದಾರೆ. ನಾನು ಅವರ ಬಗ್ಗೆ ಹೇಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ನಿಮ್ಮ ಕ್ಷೇತ್ರದ ಕೇಸು ಹಿಂದೆ ನಡೆದದ್ದು ಅದೆಲ್ಲಾ ಕಥೆ ಹೇಳುತ್ತೇನೆ. ಈಗ ಬೇಡ. ಅದನ್ನು ದೊಡ್ಡದಾಗಿ ಹೇಳಬೇಕಾಗಿದೆ. ಗೃಹಸಚಿವರಲ್ಲಿ ತಮ್ಮ ಮೂಲಕ ನಾನು ಮನವಿ ಮಾಡುತ್ತೇನೆ. ಅಧ್ಯಕ್ಷರೆ, ಇದನ್ನು ನಾವು ಲಘುವಾಗಿ ತೆಗೆದುಕೊಳ್ಳದೆ ತಮ್ಮ ಮೂಲಕ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಗೃಹಸಚಿವರು ಸಾಯಂಕಾಲದೊಳಗೆ

ಅವರನ್ನು ಬಿಡುಗಡೆ ಮಾಡತಕ್ಕ ಒಂದು ಪ್ರಾಮಾಣಿಕ ಪ್ರಯತ್ನ ಮಾಡಲಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಅವರು ಅಧಿಕಾರಿಗಳ ಜೊತೆ ಚರ್ಚೆ ಮಾಡಿಕೊಂಡು ಬರುತ್ತಾರೆ.

ಶ್ರೀ ಎಚ್.ಡಿ. ನಂಜೇಗೌಡ : ಕೇಸ್ ವಾಪಸ್ ತೆಗೆದುಕೊಂಡರೆ, ಅವರು ಅಗಲೂ ಹಠ ಮಾಡಿದರೆ ಅವರನ್ನು ಕರೆದುಕೊಂಡು ಬರುವುದಕ್ಕೆ ವಾಟಾಳರನ್ನು ಕಳುಹಿಸಬಹುದು.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಗೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಇನ್ನೊಂದು ಇದೆ. ಕೊಂಕಣ ರೈಲ್ವೆ ಬಗ್ಗೆ.

ಅಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ. ನಾಳೆಗೆ ಕೆಲಸವೇ ಇಲ್ಲದಹಾಗೆ ಆಗಿಬಿಡುತ್ತದೆ. ಕೊಂಕಣ ರೈಲ್ವೇದಲ್ಲವೇ? ನಾಳೆ ತೆಗೆದುಕೊಳ್ಳೋಣ.

ಕೊಂಕಣ ರೈಲ್ವೇ ಕಾಮಗಾರಿಯಲ್ಲಿ ಕನ್ನಡದವರಿಗೆ ಪ್ರಾತಿನಿಧ್ಯ

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಉಪಮುಖ್ಯಮಂತ್ರಿಗಳಿದ್ದಾರೆ. ಇವರೇ ಉತ್ತರ ಕೊಡಲಿ. ಸ್ವಾಮಿ, ಅಧ್ಯಕ್ಷರೆ, ಕೊಂಕಣ ರೈಲ್ವೆ ಪ್ರಾರಂಭವಾಗಬೇಕೆಂದು ಹೇಳಿ ಒಂದು ನಿರಂತರವಾದ ಹೋರಾಟವನ್ನು ಶಕ್ತಿಯುತವಾಗಿ ಮಾಡಿದರು. ಜಾರ್ಜ್ ಫರ್ನಾಂಡಿಸ್ ಅವರ ಕಾಲದಲ್ಲಿ ಇದು ನಡೆದದ್ದು ಒಳ್ಳೆಯ ಸೂಚನೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಪ್ರಾರಂಭವಾಗಿದೆ. ಈಗ ಅದು ಸುರತ್ಕಲ್, ಪಡುಬಿದ್ರೆ, ಉಡುಪಿ, ಬಾರಕೂರು, ಕುಂದಾಪುರ ಮಾರ್ಗ ಹೋಗತಕ್ಕಂಥದ್ದು. ಇಲ್ಲಿ ಪ್ರತಿಯೊಂದು ಸ್ಥಳದಲ್ಲೂ ಒಂದೊಂದು ರೈಲ್ವೆ ನಿಲ್ದಾಣ ಇದ್ದದ್ದೆ. ಈ ರೈಲ್ವೆ ನಿಲ್ದಾಣದಲ್ಲಿ ಉದ್ಯೋಗ ಯಾರು ಮಾಡಬೇಕು? ಇಲ್ಲಿರತಕ್ಕ ಸ್ಥಳೀಯರಿಗೆ ಕನ್ನಡಿಗರಿಗೆ ಉದ್ಯೋಗವನ್ನು ಕೊಡಬೇಕು ಎಂಬ ಬೇಡಿಕೆ ಮತ್ತು ಒತ್ತಾಯ ಮೊದಲಿನಿಂದಲೂ ಇದೆ. ಕರ್ನಾಟಕದವರೇ ನಮ್ಮ ರೈಲ್ವೆ ಮಂತ್ರಿಗಳು. ಅವರ ಬಗ್ಗೆ ನಮಗೆ ಬಹಳ ಗೌರವ ಇದೆ. ತೀರಾ ಅವರು ಏನೂ ಕೆಲಸ ಮಾಡಿಲ್ಲ ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಅ[illegible] ಕೆಲಸಗಳು ಆಗಬೇಕು ಎಂಬ ಒತ್ತಾಯ ಇದೆ. ಇಲ್ಲಿ ಕರ್ತವ್ಯಲೋಪ ಬ[illegible] ಆಗಿದೆ. ಈ ಕೊಂಕಣ ರೈಲ್ವೆ, ಏನು ಐದು ನಿಲ್ದಾಣಗಳು, ಅಲ್ಲಿಂದ ಕಾರವಾ[illegible] ಹೋಗುತ್ತದೆ. ನಂತರ ಅಲ್ಲಿಂದ ಬಾಂಬೆಗೆ ಹೋಗತಕ್ಕಂಥದ್ದು. ನಮ್ಮ ಗಡಿಯೊಳಗೆ ಪ್ರಾರಂಭವಾಗತಕ್ಕ ರೈಲ್ವೆ ನಿಲ್ದಾಣಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಇಲ್ಲ. ಕನ್ನಡಿಗರನ್ನು ಪ್ರಾರಂಭವಾಗುವ ಅಂಗಡಿಗಳಾಗಲಿ ಹೋಟೆಲ್‌ಗಳಾಗಲೀ ಅದು ಸಂಪೂರ್ಣ ಕನ್ನಡಿಗರದಲ್ಲ. ಟೆಂಡರ್ ಫಾರಂಗಳನ್ನು ಕನ್ನಡಿಗರಿಗೆ ಕೊಡುತ್ತಾ ಇಲ್ಲ. ಸಂಪೂರ್ಣವಾಗಿ ಉದ್ಯೋಗ ಮಲೆಯಾಳಿಗಳ ಕೈಯಲ್ಲಿದೆ. ಹೋಟೆಲು ಮಲೆಯಾಳಿಗಳ ಕೈಯಲ್ಲಿದೆ. ಎಲ್ಲಾ ಕೆಲಸಗಳೆಲ್ಲಾ ಮಲೆಯಾಳಿಗಳ ಕೈಯಲ್ಲಿ ಸೇರಿದೆ. ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಸಂಘಸಂಸ್ಥೆಗಳು ಒತ್ತಾಯ ಮಾಡಿದೆವು. ಈ ತರಹ ಅನ್ಯಾಯವಾಗಿದೆ, ಕನ್ನಡಿಗರಿಗೆ ಉದ್ಯೋಗ ಕೊಡಿ, ಟೆಂಡರ್ ಫಾರಂಗಳನ್ನೆಲ್ಲಾ ಕನ್ನಡಿಗರಿಗೆ ಕೊಡಿ, ಕನ್ನಡಿಗರು ಹೋಟೆಲ್‌ಗಳನ್ನು ತೆಗೆಯುವುದಕ್ಕೆ ಅಂಗಡಿಗಳನ್ನು ತೆಗೆಯುವುದಕ್ಕೆ ಅವಕಾಶವಾಗುತ್ತದೆ. ಕನ್ನಡಿಗರಿಗೆ ಫಾರಂಗಳನ್ನು ಕೊಡಲಿಲ್ಲ. ಎಲ್ಲಾ ಇಲ್ಲಿ ತೆಗೆಯುತ್ತಾ ಇರತಕ್ಕವರು ಮಲೆಯಾಳಿಗಳೆ. ಅವರೇ ಇಲ್ಲಿ ನೇರವಾಗಿ ಅಂಗಡಿ ಮತ್ತು ಹೋಟೆಲ್‌ಗಳನ್ನು ತೆಗೆಯುತ್ತಾ ಇದ್ದಾರೆ. ಮತ್ತು ಮಂಗಳೂರು ರೈಲ್ವೆ ನಿಲ್ದಾಣ ನೂರಕ್ಕೆ ನೂರು ಮಲೆಯಾಳಿಗಳ ಕೈಯಲ್ಲಿ ಸೇರಿಹೋಗಿದೆ. ಈ ಪರಿಸ್ಥಿತಿ ನೋಡಿದಾಗ ಕನ್ನಡಿಗರಿಗೆ ಸಂಪೂರ್ಣವಾಗಿ ಅನ್ಯಾಯವಾಗಿದೆ. ಇದನ್ನು ಸರಿಪಡಿಸುವುದಕ್ಕೆ ತಾವು ಕೊಡಲೇ